Reg. No. D. 221

# भारत का राजपत्र
# The Gazette of India
# ಭಾರತ ರಾಜ ಪತ್ರ

(EXTRAORDINARY)
ವಿಶೇಷ ಸಂಚಿಕೆ

भाग—IX अनुभाग 1
PART IX SECTION 1
ಭಾಗ IX ವಿಭಾಗ 1

प्राधिकार से प्रकाशित
Published by Authority
ಪ್ರಾಧಿಕಾರದ ಮೇರೆಗೆ ಪ್ರಕಟಿತವಾಗಿದೆ

| | | | |
|---|---|---|---|
| सं—1 | नई दिल्ली सोमवार, नोव्हेंबर 10, 1986 | कार्तिक 19, 1908 (शक) | खण्ड—4 |
| No. 1 | New Delhi Monday, November 10, 1986 | Karthika 19, 1908 (Saka) | Vol. 4 |
| ಸಂಖ್ಯೆ ೧ | ನವದೆಹಲಿ ಸೋಮವಾರ, ನವೆಂಬರ್ ೧೦, ೧೯೮೬ | ಕಾರ್ತೀಕ ೧೯, ೧೯೦೮ (ಶಕ) | ಸಂಪುಟ ೪ |

## MINISTRY OF LAW AND JUSTICE
### (Legislative Department)

New Delhi, September 8, 1986/Bhadrapada 17, 1908 (Sakha)

The translations in Kannada of the following namely — (1) The Public Servants (Inquiries) Act, 1850 (2) The Caste Disabilities Removal Act, 1850 (3) The Dramatic Performances Act, 1876 (4) The Epidemic Diseases Act, 1897 (5) The Police (Incitement to Disaffection) Act, 1922 (6) The Hindu Inheritance (Removal of Disabilities) Act, 1928 (7) The Hindu Gains of Learning Act, 1930 (8) The Arya Marriage Validation Act, 1937 (9) The Employees Liability Act, 1938 (10) The Weekly Holidays Act, 1942 (11) The Foreigners Act, 1946 (12) The Representation of the People (Miscellaneous Provisions) Act, 1956 (13) The Standards of Weights and Measures Act, 1976 (14) The National Library of India Act, 1976—are hereby published under the authority of the President and shall be deemed to be the authorised translations thereof in Kannada under clause (a) of Section 2 of the authorised Translations (Central Laws) Act, 1973 (50 of 1973).

ಕೆಳಕಂಡ ಅಧಿನಿಯಮಗಳು ಎಂದರೆ (೧) ಲೋಕ ನೌಕರರ (ವಿಚಾರಣಾ) ಅಧಿನಿಯಮ, ೧೮೫೦ (೨) ಜಾತಿ ಅಸಮರ್ಥತೆಗಳನ್ನು ತೆಗೆದುಹಾಕುವ ಅಧಿನಿಯಮ, ೧೮೫೦ (೩) ನಾಟಕ ಪ್ರದರ್ಶನ ಅಧಿನಿಯಮ, ೧೮೭೬ (೪) ಸಾಂಕ್ರಾಮಿಕ ರೋಗಗಳ ಅಧಿನಿಯಮ, ೧೮೯೭ (೫) ಪೊಲೀಸು (ಅಪ್ರೀತಿ ಪ್ರಚೋದನಾ) ಅಧಿನಿಯಮ, ೧೯೨೨ (೬) ಹಿಂದೂವಾರಸು (ಅಸಮರ್ಥತಾ ನಿವಾರಣಾ) ಅಧಿನಿಯಮ, ೧೯೨೮ (೭) ಹಿಂದೂ ವಿದ್ಯಾರ್ಥನ ಅಧಿನಿಯಮ, ೧೯೩೦ (೮) ಆರ್ಯ ವಿವಾಹ ಮಾನ್ಯೀಕರಣ ಅಧಿನಿಯಮ, ೧೯೩೭ (೯) ನಿಯೋಜಕ ಹೊಣೆಗಾರಿಕೆ ಅಧಿನಿಯಮ, ೧೯೩೮ (೧೦) ವಾರದ ರಜಾ ದಿನ ಅಧಿನಿಯಮ, ೧೯೪೨ (೧೧) ವಿದೇಶಿಯರ ಅಧಿನಿಯಮ, ೧೯೪೬ (೧೨) ಜನತಾ ಪ್ರಾತಿನಿಧ್ಯ (ಸಂಕೀರ್ಣ ಉಪಬಂಧಗಳ) ಅಧಿನಿಯಮ, ೧೯೫೬ (೧೩) ತೂಕ ಮತ್ತು ಅಳತೆ ಮಾನಕ ಅಧಿನಿಯಮ, ೧೯೭೬, (೧೪) ಭಾರತ ರಾಷ್ಟ್ರೀಯ ಗ್ರಂಥಾಲಯ ಅಧಿನಿಯಮ, ೧೯೭೬.

ಇವುಗಳ ಕನ್ನಡ ಭಾಷಾಂತರವನ್ನು ರಾಷ್ಟ್ರಪತಿಯವರ ಪ್ರಾಧಿಕಾರದ ಮೇರೆಗೆ ಪ್ರಕಟಿಸಲಾಗಿದೆ ಮತ್ತು ಅಧಿಕೃತ ಭಾಷಾಂತರಗಳ ಅಧಿನಿಯಮ, ೧೯೭೩ ರ (೧೯೭೩ ರ ೫೦) ೨ನೇ ಪ್ರಕರಣದ, (ಕ) ಖಂಡದ ಮೇರೆಗೆ ಇವುಗಳನ್ನು ಆ ಅಧಿನಿಯಮಗಳ ಅಧಿಕೃತ ಕನ್ನಡ ಭಾಷಾಂತರವೆಂದು ಭಾವಿಸತಕ್ಕದ್ದು.

**ಪೊಲೀಸು (ಅಪ್ರೀತಿ ಪ್ರಚೋದನಾ) ಅಧಿನಿಯಮ, 1922**

(1922ರ ಅಧಿನಿಯಮ ಸಂಖ್ಯೆ 22)

[5ನೇ ಅಕ್ಟೋಬರ್, 1922.]

ಪೊಲೀಸರಲ್ಲಿ ಅಪ್ರೀತಿಯನ್ನು ಹರಡುವುದಕ್ಕೆ ಮತ್ತು ಸದೃಶ ಅಪರಾಧಗಳಿಗೆ ದಂಡವನ್ನು ವಿಧಿಸುವುದಕ್ಕಾಗಿ ಉಪಬಂಧ ಕಲ್ಪಿಸುವ ಅಧಿನಿಯಮ.

ಪೊಲೀಸರಲ್ಲಿ ಅಪ್ರೀತಿಯನ್ನು ಹರಡುವುದಕ್ಕೆ ಮತ್ತು ಇತರ ಸದೃಶ ಅಪರಾಧಗಳಿಗೆ ದಂಡ ವಿಧಿಸುವುದು ವಿಹಿತವಾದುದರಿಂದ, ಕೆಳಕಂಡಂತೆ ಈ ಮೂಲಕ ಅಧಿನಿಯಮಿತಿಗೊಳಿಸಲಾಗಿದೆ.

**1. ಸಂಕ್ಷಿಪ್ತ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ.**– (1) ಈ ಅಧಿನಿಯಮವನ್ನು ಪೊಲೀಸು (ಅಪ್ರೀತಿ ಪ್ರಚೋದನಾ) ಅಧಿನಿಯಮ, 1922 ಎಂದು ಕರೆಯತಕ್ಕದ್ದು.

(2) ಇದು 1956ರ ನವೆಂಬರ್ 1ಕ್ಕೆ ನಿಕಟಪೂರ್ವದಲ್ಲಿ ಬಿ ಭಾಗದ ರಾಜ್ಯಗಳಲ್ಲಿ ಅಡಕವಾಗಿದ್ದ ರಾಜ್ಯಕ್ಷೇತ್ರಗಳಿನ್ನುಳಿದು ಸಮಗ್ರ ಭಾರತಕ್ಕೆ ವ್ಯಾಪ್ತವಾಗುತ್ತದೆ.

(3) ಇದು, ರಾಜ್ಯ ಸರ್ಕಾರವು ಸರ್ಕಾರಿ ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ ನಿರ್ದೇಶಿಸಬಹುದಾದ ದಿನಾಂಕದಂದು ಯಾವುದೇ ರಾಜ್ಯದಲ್ಲಿ ಅಥವಾ ರಾಜ್ಯದ ಯಾವುದೇ ಭಾಗದಲ್ಲಿ ಜಾರಿಗೆ ಬರತಕ್ಕದ್ದು.

**2. ಪರಿಭಾಷೆ.**– ಈ ಅಧಿನಿಯಮದಲ್ಲಿ, "ಪೊಲೀಸು ದಳದ ಸದಸ್ಯ" ಎಂಬ ಪದಾವಳಿಗೆ, ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಲಾದ ಯಾವುದೇ ಅಧಿನಿಯಮಿತಿಯ ಮೇರೆಗೆ ಪೊಲೀಸು ಕರ್ತವ್ಯಗಳನ್ನು ನಿರ್ವಹಿಸುವದಕ್ಕಾಗಿ ನಿಯುಕ್ತಗೊಳಿಸಲಾಗಿರುವ ಅಥವಾ ಭರ್ತಿ ಮಾಡಲಾಗಿರುವ ಯಾರೇ ವ್ಯಕ್ತಿ ಎಂದು ಅರ್ಥ.

**3. ಅಪ್ರೀತಿ, ಇತ್ಯಾದಿಯನ್ನು ಉಂಟು ಮಾಡುವುದಕ್ಕಾಗಿ ದಂಡ.**– ಯಾರೇ ವ್ಯಕ್ತಿಯು ಭಾರತದಲ್ಲಿ ಕಾನೂನು ಮೂಲಕ ಸ್ಥಾಪಿತವಾದ ಸರ್ಕಾರದ ವಿರುದ್ಧ ಪೊಲೀಸು ದಳದ ಸದಸ್ಯರಲ್ಲಿ ಉದ್ದೇಶಪೂರ್ವಕವಾಗಿ ಅಪ್ರೀತಿಯನ್ನುಂಟು ಮಾಡಿದರೆ ಅಥವಾ ಉಂಟುಮಾಡಲು ಪ್ರಯತ್ನಿಸಿದರೆ ಅಥವಾ ಅಪ್ರೀತಿಯನ್ನುಂಟು ಮಾಡುವ ಸಂಭವವಿದೆಯೆಂದು ತನಗೆ ತಿಳಿಸದಿರುವ ಯಾವುದೇ ಕೃತ್ಯವನ್ನು ಮಾಡಿದರೆ ಅಥವಾ ಪೊಲೀಸು ದಳದ ಯಾರೇ ಸದಸ್ಯನನ್ನು ತನ್ನ ಸೇವೆಗಳನ್ನು ನಿಲ್ಲಿಸುವಂತೆ ಅಥವಾ

ಶಿಸ್ತನ್ನು ಉಲ್ಲಂಘಿಸುವಂತೆ ಪ್ರೇರೇಪಿಸಿದರೆ ಅಥವಾ ಪ್ರೇರೇಪಿಸಲು ಪ್ರಯತ್ನಿಸಿದರೆ ಅಥವಾ ಪ್ರೇರೇಪಿಸುವ ಸಂಭವವಿದೆಯೆಂದು ತಾನು ತಿಳಿದಿರುವ ಯಾವುದೇ ಕೃತ್ಯವನ್ನು ಮಾಡಿದರೆ, ಅವನು ಆರು ತಿಂಗಳುಗಳವರೆಗಿನ ಕಾರಾವಾಸದಿಂದ ಅಥವಾ ಇನ್ನೂರು ರೂಪಾಯಿಗಳವರೆಗಿನ ಜುಲ್ಮಾನೆಯಿಂದ ಅಥವಾ ಅವೆರಡರಿಂದ ದಂಡಿತನಾಗತಕ್ಕದ್ದು.

**ವಿವರಣೆ.–** ಸರ್ಕಾರವು ಕೈಗೊಂಡ ಕ್ರಮಗಳನ್ನು ಕಾನೂನುಸಮ್ಮತ ಉಪಾಯಗಳಿಂದ ಸರ್ಕಾರದ ಕ್ರಮಗಳನ್ನು ಬದಲಾವಣೆ ಮಾಡುವ ಉದ್ದೇಶದಿಂದ ಅವುಗಳನ್ನು ಕುರಿತು ಅಸಮ್ಮತಿಯ ಅಥವಾ ಸರ್ಕಾರವು ಕೈಗೊಂಡಿರುವ ಆಡಳಿತ ಕ್ರಮವನ್ನು ಅಥವಾ ಇತರ ಯಾವುದೇ ಕ್ರಮವನ್ನು ಕುರಿತ ಅಸಮ್ಮತಿಯ ಪದಾವಳಿಗಳು, ಅವು ಅಪ್ರೀತಿಯನ್ನು ಉಂಟು ಮಾಡಿದ ಅಥವಾ ಉಂಟು ಮಾಡುವ ಉದ್ದೇಶದಿಂದ ಮಾಡಿದ ಅಥವಾ ಉಂಟು ಮಾಡುವ ಸಂಭವವುಳ್ಳ ಹೊರತು ಈ ಪ್ರಕರಣದ ಮೇರೆಗೆ ಅಪರಾಧವಾಗುವುದಿಲ್ಲ.

**4. ಕೆಲವು ಉದ್ದೇಶಗಳಿಗಾಗಿ ಪೊಲೀಸು ಸಂಘಗಳು ಮತ್ತು ಇತರ ವ್ಯಕ್ತಿಗಳು ಮಾಡಿದ ಕೃತ್ಯಗಳ ಉಳಿಸುವಿಕೆ.–** (ಎ) ಪೊಲೀಸು ದಳದ ಯಾರೇ ಸದಸ್ಯನನ್ನು, ಅವನು ತನ್ನ ಸೇವೆಯನ್ನು ನಿಲ್ಲಿಸುವಂತೆ ಕಾನೂನಿನ ಮೂಲಕ ಪ್ರಾಧಿಕೃತವಾದ ಯಾವುದೇ ರೀತಿಯಲ್ಲಿ ಪ್ರೇರೇಪಿಸುವುದರ ಮೂಲಕ ಅವನ ಕಲ್ಯಾಣ ಅಥವಾ ಹಿತಾಸಕ್ತಿಯನ್ನು ವೃದ್ಧಿಗೊಳಿಸುವ ಉದ್ದೇಶಕ್ಕಾಗಿ; ಅಥವಾ

(ಬಿ) ಪೊಲೀಸು ದಳದ ಸದಸ್ಯರ ಹಿತಾಸಕ್ತಿಗಳನ್ನು ಅಭಿವೃದ್ಧಿಗೊಳಿಸುವ ಉದ್ದೇಶಕ್ಕಾಗಿ ರಚಿಸಲಾಗಿರುವ ಯಾವುದೇ ಸಂಘವು ಸರ್ಕಾರದಿಂದ ಪ್ರಾಧಿಕೃತವಾದ ಅಥವಾ ಮಾನ್ಯತೆ ಪಡೆದ ಸಂಘವಾಗಿರುವಲ್ಲಿ ಮತ್ತು ಮಾಡಲಾದ ಕೃತ್ಯವನ್ನು ಸರ್ಕಾರದಿಂದ ಅನುಮೋದಿತನಾದ ಸಂಘದ ಯಾವುವೇ ನಿಯಮಗಳ ಅಥವಾ ಕಟ್ಟಳೆಗಳ ಮೇರೆಗೆ ಮಾಡಲಾಗಿದ್ದರೆ, ಅಂಥ ಸಂಘದ ಮೂಲಕ ಅಥವಾ ಅದರ ಪರವಾಗಿ ಸದ್ಭಾವನೆಯಿಂದ ಮಾಡಿದ ಯಾವುದೇ ಕೃತ್ಯವನ್ನೂ ಈ ಅಧಿನಿಯಮದ ಮೇರೆಗೆ ಅಪರಾಧವೆಂದು ಭಾವಿಸತಕ್ಕದ್ದಲ್ಲ.

**5. ಅಧೀನ ನ್ಯಾಯಾಲಯಗಳು ಅಪರಾಧಗಳ ವಿಚಾರಣೆ ನಡೆಸಲು ಮಂಜೂರಾತಿ.–** ಯಾವ ನ್ಯಾಯಾಲಯವು ಅಧಿನಿಯಮದ ಮೇರೆಗಿನ ಯಾವುದೇ ಅಪರಾಧದ ವಿಚಾರಣೆಯನ್ನು ಜಿಲ್ಲಾ ಮ್ಯಾಜಿಸ್ಟ್ರೇಟನ ಅಥವಾ ಪ್ರೆಸಿಡೆನ್ಸಿ ಟೌನ್ ಸಂಬಂಧದಲ್ಲಾದರೆ ಪೊಲೀಸು ಕಮಿಷನರ ಪೂರ್ವ ಮಂಜೂರಾತಿಯ ಹೊರತು ಅಥವಾ ಅವರಿಂದ ದೂರು ಬಂದ ಹೊರತು ನಡೆಸತಕ್ಕದ್ದಲ್ಲ.

**6. ಮೊಕದ್ದಮೆಗಳ ಅಧಿವಿಚಾರಣೆ.–** (1) ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟನ ಅಥವಾ ಮೊದಲನೇ ದರ್ಜೆಯ ಮ್ಯಾಜಿಸ್ಟ್ರೇಟನ ನ್ಯಾಯಾಲಯಕ್ಕಿಂತ ಕೆಳಗಿನ ಯಾವುದೇ ನ್ಯಾಯಾಲಯವೂ ಈ ಅಧಿನಿಯಮದ ಮೇರೆಗಿನ ಅಪರಾಧದ ಅಧಿವಿಚಾರಣೆ ನಡೆಸತಕ್ಕದ್ದಲ್ಲ.

(2) ದಂಡ ಪ್ರಕ್ರಿಯಾ ಸಂಹಿತೆ, 1898 (1898ರ 5) XXIIನೇ ಅಧ್ಯಾಯದಲ್ಲಿ ಏನೇ ಒಳಗೊಂಡಿದ್ದಾಗ್ಯೂ ಈ ಅಧಿನಿಯಮದ ಮೇರೆಗಿನ ಯಾವುದೇ ಅಪರಾಧವನ್ನು ಸಂಕ್ಷಿಪ್ತವಾಗಿ ಅಧಿವಿಚಾರಣೆ ಮಾಡತಕ್ಕದ್ದಲ್ಲ.

**ಅನುಸೂಚಿ**

**(2ನೇ ಪ್ರಕರಣವನ್ನು ನೋಡಿ)**

| ವರ್ಷ | ಸಂಖ್ಯೆ | ಸಂಕ್ಷಿಪ್ತ ಹೆಸರು |
|---|---|---|
| ಪರಿಷತ್ ಸಮೇತ ಗವರ್ನರ್ ಜನರಲ್‌ನ ಅಧಿನಿಯಮಗಳು | | |
| 1859 | XXIV | ಮದರಾಸು ಜಿಲ್ಲೆ ಪೊಲೀಸು ಅಧಿನಿಯಮ, 1859 |
| 1861 | V | ಪೊಲೀಸು ಅಧಿನಿಯಮ, 1961 |
| 1888 | III | ಪೊಲೀಸು ಅಧಿನಿಯಮ, 1888 |
| 1892 | V | ಬಂಗಾಳ ಸೇನಾ ಪೊಲೀಸು ಅಧಿನಿಯಮ, 1892 |
| 1888 | III | ಮದರಾಸು ಅಧಿನಿಯಮ<br>ಮದರಾಸು ನಗರ ಪೊಲೀಸು ಅಧಿನಿಯಮ, 1888 |
| 1890 | IV | ಮುಂಬಯಿ ಅಧಿನಿಯಮಗಳು<br>ಮುಂಬಯಿ ಜಿಲ್ಲೆ ಪೊಲೀಸು ಅಧಿನಿಯಮ, 1890 |
| 1902 | IV | ಮುಂಬಯಿ ನಗರ ಪೊಲೀಸು ಅಧಿನಿಯಮ, 1902 |
| 1866<br>" | II | ಬಂಗಾಳ ಅಧಿನಿಯಮಗಳು<br>ಕಲ್ಕತ್ತಾ ಹೊರವಲಯ ಪೊಲೀಸು ಅಧಿನಿಯಮ, 1866 |
| 1866 | IV | ಕಲ್ಕತ್ತಾ ಪೊಲೀಸು ಅಧಿನಿಯಮ, 1866 |
| 1890 | III | ಕಲ್ಕತ್ತಾ ಬಂದರು ಅಧಿನಿಯಮ, 1890 |

| | | |
|---|---|---|
| 1920 | II | ಪೂರ್ವ ಗಡಿಗಳ ರಾಹಿಫಲ್ ಗಳ (ಬಂಗಾಳ ಪಡೆ) ಅಧಿನಿಯಮ, 1920 |
| 1920 | I | ಅಸ್ಸಾಂ ಅಧಿನಿಯಮ<br>ಅಸ್ಸಾಂ ರಾಯಿಫಲ್ ಅಧಿನಿಯಮ, 1920 |
| ಪರಿಷತ್ ಸಮೇತ ಗವರ್ನರ್ ಜನರಲ್ ನು ಮಾಡಿದ ವಿನಿಯಮ | | |
| 1888 | II | ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳ ಸೇನಾ ಪೊಲೀಸು ವಿನಿಯಮ, 1888 |